ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 23-12-2025 ರಂದು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜೆ ಜಿ ಎಚ್ ವಕೀಲರಿಂದಃ**

1. ಆರೋಪಿ ನನ್ನ ಸಂಬಂದಿಕರಲ್ಲ, ಆರೋಪಿ ನನಗೆ ಸ್ನೇಹಿತ. ಆರೋಪಿ ನನ್ನ ನಡುವೆ ಹಣ ಕೊಡುವುದು ಮತ್ತು ತೆಗೆದುಕೊಳ್ಳುವುದು ಬಹಳ ದಿನಗಳಿಂದ ಇರುತ್ತದೆ. ನನ್ನ ಮತ್ತು ಆರೋಪಿಯ ಈ ಹಿಂದಿನ ವ್ಯವಹಾರಗಳಲ್ಲಿ ನಾನು ನೀಡಿದ ಹಣವನ್ನು ಆರೋಪಿ ಮರುಪಾವತಿ ಮಾಡಿರುತ್ತಾರೆ. ನಾನು ಈ ಹಿಂದೆ ಆರೋಪಿಗೆ ಬೈಕ್ ರಿಪೇರಿ ಸಲುವಾಗಿ 5-10 ಸಾವಿರ ಹಣವನ್ನು ನೀಡಿರುತ್ತೇನೆ. ಸದರಿ ಹಣವನ್ನು ಆರೋಪಿ ನನಗೆ ಮರುಪಾವತಿ ಮಾಡಿರುತ್ತಾರೆ.

2. ನಿ.ಪಿ-1 ರಲ್ಲಿರುವ ಬರವಣಿಗೆಯನ್ನು ಆರೋಪಿಯೇ ನಮ್ಮ ಕಚೇರಿಯಲ್ಲಿ ನಮ್ಮ ಸಿಬ್ಬಂದಿಯಿಂದ ಬರೆಸಿರುತ್ತಾರೆ. ನಿ.ಪಿ-1 ಚೆಕ್ ನ್ನು ದಿಃ 02-05-2025 ಕ್ಕಿಂತ ಒಂದು ತಿಂಗಳು ಪೂರ್ವದಲ್ಲಿ ಆರೋಪಿ ನನಗೆ ನೀಡಿರುತ್ತಾರೆ.

3. ಆರೋಪಿ ಜಮೀನು ತೆಗೆದುಕೊಳ್ಳುವುದಾಗಿ ಹೇಳಿ ನನ್ನ ಬಳಿ ಹಣ ಪಡೆದಿರುತ್ತಾರೆ. ನಾನು ರೂ4-5 ಲಕ್ಷದಷ್ಟು ಹಣವನ್ನು ಆರೋಪಿಯನ್ನು ಹೊರತುಪಡಿಸಿ ಬೇರೇ ಯಾರಿಗೂ ನೀಡಿಲ್ಲ.

4. ನಾನು ಆರೋಪಿಯಿಂದ ಎರಡು ಚೆಕ್ ಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ಆರೋಪಿಗೆ ಒಟ್ಟು ರೂ7,50,000/- ಹಣವನ್ನು ನೀಡಿರುತ್ತೇನೆ. ಅದರಲ್ಲಿ ರೂ5,50,000/- ಹಣವನ್ನು ನನ್ನ ಬ್ಯಾಂಕ್ ಖಾತೆಯಿಂದ ಆರೋಪಿಯ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ. ಉಳಿದ ರೂ.2,00,000/- ಹಣವನ್ನು ನಗದು ಮೂಲಕ ಆರೋಪಿಗೆ ನನ್ನ ಕಚೇರಿಯಲ್ಲಿ ದಿಃ 14-06-2024 ರಂದು ನೀಡಿರುತ್ತೇನೆ. ಸದರಿ ರೂ.2,00,000/- ಹಣ ನಮ್ಮ ಕಚೇರಿಯಲ್ಲಿ ಆ ದಿನ ಇತ್ತು. ಆ ದಿನ ನಾನು ಆರೋಪಿಗೆ ರೂ.2,00,000/- ಹಣವನ್ನು ನಗದಾಗಿ ನೀಡುವಾಗ ನಾನು , ಆರೋಪಿ ಹಾಗೂ ಆರೋಪಿಯ ಮಗನನ್ನು ಹೊರತುಪಡಿಸಿ ಬೇರೇ ಯಾರು ಇರಲಿಲ್ಲ.

6. ಮಣ್ಣತ್ತಿ ಊರಿನ ಓಂಕಾರ ಭಟ್ ರವರ ಪರಿಚಯ ನನಗೆ ಇರುವುದಿಲ್ಲ. ನನ್ನ ಮತ್ತು ಸದರಿ ಓಂಕಾರ ಭಟ್ ರವರ ನಡುವೆ ಯಾವುದೇ ವ್ಯವಹಾರಗಳು ಇರುವುದಿಲ್ಲ.

7. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು SBI ಬ್ಯಾಂಕ್ ನ A/c No 54027191628 ಕ್ಕೆ ಸಂಬಂದಿಸಿದ ಹಣದ transactions ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ನಿ,ಡಿ-1 ರಲ್ಲಿರುವ ಹಣವನ್ನು ಸದರಿ ಓಂಕಾರ ಭಟ್ ರವರು ನನ್ನ ಖಾತೆಗೆ ಕಳುಹಿಸಿದ ಹಣ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇರೇಯವರಿಗೆ ನೀಡಿರುವ ಹಾಕಿರುವ ಹಣ ಎಂದು ಹೇಳಿರುತ್ತಾರೆ.

8. ಸದರಿ ಓಂಕಾರ ಭಟ್ ರವರು ಆರೋಪಿಯ ಚಿಕ್ಕಪ್ಪ ನ ಮಗ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿ,ಪಿ-8 ಲೀಗಲ್ ನೋಟೀಸ್ ಗೆ ಆರೋಪಿ ಪ್ರತ್ಯುತ್ತರ ನೀಡಿರುತ್ತಾರೆ

ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಸದರಿ ಪ್ರತ್ಯುತ್ತರದ ನೋಟೀಸ ತೋರಿಸಿದ್ದು, ಸದರಿ ದಾಖಲೆ ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು.

9. ನಾನು ಈ ಪ್ರಕರಣವನ್ನು ಹೊರತುಪಡಿಸಿ ಬೇರೇ ಯಾವುದೇ ಚೆಕ್ ಪ್ರಕರಣವನ್ನು ದಾಖಲಿಸಿಲ್ಲ.

10. ಆರೋಪಿ ನನ್ನಿಂದ ಸುಮಾರು ವರ್ಷಗಳ ಹಿಂದೆ ರೂ3 ಲಕ್ಷ ಹಣವನ್ನು ತನ್ನ ಕುಟುಂಬದ ಅವಶ್ಯಕತೆಗಾಗಿ ಸಾಲವಾಗಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರೂ.3 ಲಕ್ಷ ಹಣವನ್ನು ಆರೋಪಿ ಆಗಸ್ಟ -2024 ರಂದು ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಆರ್ಥಿಕ ಸಂಕಷ್ಟದಲ್ಲಿದ್ದಾಗ ಆರೋಪಿ ಸಹಿ ಮಾಡಿದ ಎರಡು ಖಾಲಿ ಚೆಕ್ ಗಳನ್ನು ನಾನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ಬೇರೆಯವರ ಮೂಲಕ ಬರೆಯಿಸಿ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

11. ಆರೋಪಿ ನನಗೆ ಯಾವುದಲೇ ಹಣವನ್ನು ಮರುಪಾವತಿ ಮಾಡುವ ಬಾಧ್ಯತೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**